| |
|---|
| C.R.P.67<br>Form No.4 (Civil)<br>Deposition Sheets<br>(R.P.No.57) |

***1** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.*

**S.C.:39/2021**

ಪ್ರಾ.ಸಾ. 2

ಚಾ.ಸಾ. 2

ಪ್ರಮಾಣವಚನ ಬೋಧಿಸಿದ ದಿನಾಂಕ **30.11.2021**

ಸಾಕ್ಷಿದಾರರ ಹೆಸರು: ಸ್ವಾಮಿ
ತಂದೆಯ/ಗಂಡನ ಹೆಸರು: ಸಿದ್ದಯ್ಯ
ವಯಸ್ಸು : 45 ವರ್ಷ
ಉದ್ಯೋಗ : ವ್ಯವಸಾಯ
ವಾಸ : ಮರಿಗೌಡ ಬಡಾವಣೆ, ಮಂಡ್ಯ

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಾದ ಶ್ರೀಮತಿ ಶಕೀಲಾ ರವರಿಂದಃ

1. ಚಾಸಾ 1 ನನ್ನ ಮಗ, ಚಾಸಾ 3 ರಿಂದ 5 ರವರು ಗೊತ್ತು. ಚಾಸಾ 6- ಪರಿಮಳ ನನ್ನ ಹೆಂಡತಿ., ಚಾಸಾ 7 ರಿಂದ 10 ರವರು ಗೊತ್ತು. 1 ಮತ್ತು 2 ನೇ ಆರೋಪಿ ನನ್ನ ತಂಗಿಯರ ಗಂಡಂದಿರು, 3 ನೇ ಆರೋಪಿ ನನ್ನ ಸ್ವಂತ ಅಣ್ಣ, 4, 5 ಮತ್ತು 7 ನೇ ಆರೋಪಿ-ಭಾಗ್ಯ ನನ್ನ ತಂಗಿ, ಮತ್ತು ಲಕ್ಷ್ಮಿ ನನ್ನ ಅಕ್ಕ, ಪುಟ್ಟೀರಮ್ಮ ನನ್ನ ತಾಯಿ. 8 ನೇ ಆರೋಪಿ ನನ್ನ ಹೆಂಡತಿಯ ಚಿಕ್ಕಪ್ಪ. ಸದರಿ ನ್ಯಾಯಾಲಯದ ಮುಂದಿರುವ ಆರೋಪಿಗಳು ಸದರಿಯವರಾಗಿದ್ದು ಗುರುತಿಸಿದ್ದೇನೆ.

2. ಹೋದ ವರುಷ 09 ನೇ ತಿಂಗಳು 30 ನೇ ತಾರೀಖು ಬೆಳಿಗ್ಗೆ 9.00-9.30 ರ ಸಮಯದಲ್ಲಿ ನಾನು ಮರಿಗೌಡ ಬಡಾವಣೆಯಲ್ಲಿರುವ ನಮ್ಮ ಮನೆಯಲ್ಲಿದ್ದೆ. ಚಾಸಾ 1 ಸಹ ಇದ್ದರು. ನನ್ನ ಹೆಂಡತಿ ಹಾಗೂ ಮಗಳು ಅವರ ಚಿಕ್ಕಪ್ಪನ ಮನೆ ಹೊಸಹಳ್ಳಿಗೆ ಹೋಗಿದ್ದರು. ನಾನು ನಮ್ಮ ಮನೆಯ ಕಿಟಕಿಗಳನ್ನು ಬಾಗಿಲು ಹಾಗೂ ರಿಪೇರಿ ಮಾಡಿಸುವ ಸಲುವಾಗಿ 2-3 ದಿನಗಳಿಂದ ಕೆಲಸ ಮಾಡಿಸುತ್ತಿದ್ದೆ. ಸದರಿ ದಿನ ಆರೋಪಿಗಳೆಲ್ಲರೂ ಸೇರಿ ಗಲಾಟೆ ಮಾಡಿದ್ದರು. ಆರೋಪಿಗಳೆಲ್ಲರೂ ಯಾಕೆ ರಿಪೇರಿ ಮಾಡಿಸುತ್ತಿದ್ದೀಯ ಎಂದು ಕೇಳಲು ಈ ಮನೆಯಲ್ಲಿ ನಾನು ಇರುವ ಕಾರಣ ರಿಪೇರಿ ಮಾಡಿಸುತ್ತಿದ್ದೇನೆ. ಅದಕ್ಕೆ ಆರೋಪಿಗಳು ನೀನು ಯಾರು ಬೋಳಿ ಮಗನೆ ಎಂದು ನನ್ನನ್ನು ಬೈದರು. ಶಂಕರ ಎನ್ನುವವರು ತಾರಸಿ ಮೇಲೆ ಹೋಗಿ ನೀನು ಯಾಕೆ ನಾವು ಹೇಳಿದಂತೆ ಕೇಳುವುದಿಲ್ಲ, ನೀನು ಬದುಕಿದ್ದರೆ ತಾನೆ ಎಂದು ನನ್ನ ತಲೆಗೆ ದಿಂಡುಗಲ್ಲನ್ನು ಎತ್ತಿ ಹಾಕಿದ್ದರು. ಆಗ ನಾನು ಮನೆಯ ಮುಂಬಾಗ ನಿಂತಿದ್ದೆ. ನನ್ನ ತಲೆಯ ಬಲಬಾಗಕ್ಕೆ ತಾಗಿ, ತೀವ್ರ ಸ್ವರೂಪ ಪೆಟ್ಟಾಗಿ ರಕ್ತ ಬಂತು. ಉಳಿದ

ಆರೋಪಿಗಳು ದೊಣ್ಣೆ ಕುಡ್ಲು ತಂದರು. ಸಿದ್ದಪ್ಪ ಹಾಗೂ ಶ್ರೀನಿಧಿ ಎನ್ನುವವರ ಕೈಯಲು ದೊಣ್ಣೆಗಳು ಇದ್ದವು. ಗೀತಾ ಹಾಗು ಲಕ್ಷ್ಮಿ ಕೈಯಲ್ಲಿ ಕುಡುಗೋಲು ಹಾಗೂ ಭಾಗ್ಯ ಎನುವವರ ಕೈಯಲ್ಲಿ ಬೇರೆ ತರಹದ ಕುಡುಗೋಲು ಇತ್ತು. ಸಿದ್ದಪ್ಪ ಹಾಗೂ ಶ್ರೀನಿಧಿ ಯವರು ದೊಣ್ಣೆಯಿಂದ ನನ್ನ ಬಲಗಣ್ಣಿಗೆ ಹಾಗೂ ಕೆನ್ನೆಗೆ ಹೊಡೆದರು. ಗೀತಾ, ಭಾಗ್ಯ ಹಾಗು ಲಕ್ಷ್ಮಿ ಕುಡುಗೋಲಿನಿಂದ ನನ್ನ ಬಲಕಪಾಲ ಹಾಗೂ ಬಲಕಣ್ಣಿನ ಬಳಿ ಹೊಡೆದರು. ನನ್ನ ತಾಯಿ ಕಾಲಿಂದ ನನಗೆ ಒದ್ದರು. ಶಂಕರ ತಾರಸಿ ಮೇಲಿಂದ ಕೆಳಗೆ ಇಳಿದು ಬಂದು ಶ್ರೀನಿಧಿ ಕೈಯಿಂದ ದೊಣ್ಣೆ ಕಸಿದುಕೊಂಡು ನನ್ನ ಬಲತಲೆಗೆ ಹೊಡೆದ. ಸದರಿಯವರ ಹಲ್ಲೆಯಿಂದ ನಾನು ರಕ್ತ ಗಾಯವಾಗಿ ಕೆಳಗೆ ಬಿದ್ದೆ . ಆಗ ನನ್ನ ಮಗ ಚಾಸಾ 1 ಬಂದು ಸದರಿ ಹಲ್ಲೆಗೆ ಅಡ್ಡಹಿಡಿದಾಗ ಆತನಿಗೂ ಅವರು ಹೊಡೆದರು. ನಾನು ಕಂಡಂತೆ ಚಾಸಾ 1 ರವರಿಗೆ ಎರಡೂ ಕೈ ಬೆರಳಿಗೆ , ಬಲಕಿವಿಯ ಬಳಿ ಏಟಾಯಿತು. ಅಲ್ಲಿಗೆ ಶರತ್ , ಜಯಣ್ಣ ಹಾಗೂ ರಾಘು ಬಂದರು. ಆಗ 1 ನೇ ಆರೋಪಿ ಶಂಕರ ಎನ್ನುವವರು ನಾವೆಲ್ಲರೂ ಚಿಕ್ಕವೀರಬದ್ರ ಹೇಳಿದಂತೆ ಮಾಡಿದ್ದೇವೆ ಈಗ ಆತ ಹೇಳಿದಂತೆ ಆ ಕಡೆ ಈ ಕಡೆ ಓಡಿ ಹೋಗಿ ಎಂದು ಆತನೂ ಓಡಿ ಹೋದ. ನನ್ನನ್ನು ಯಾರೋ ಮಂಡ್ಯದ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ 1 ರರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಆದರೆ ಆಗ ನನಗೆ ಪ್ರಜ್ಞೆ ತಪ್ಪಿತ್ತು. ನಂತರ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋದರು ಎಂದು ಗೊತ್ತಾಯಿತು. ಆಲ್ಲಿ ನಾನು 20-25 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ. ಚಾಸಾ 6 ನನ್ನ ಜೊತೆ ಇದ್ದರು. ನನಗೆ ಇನ್ನು ಮುಂದುವರೆದ ಚಿಕಿತ್ಸೆಯ ಅಗತ್ಯವಿದೆ ಎಂದು ಹೇಳಿದ್ದಾರೆ. ಆ ಕಾರಣ ಆಸ್ಪತ್ರೆಯ ಖರ್ಚು ಸುಮಾರು 20-25 ಸಾವಿರಗಳು ಎಂದು ಹೇಳಬಹುದು. ಚಾಸಾ 6 ರವರು ಸದರಿ ಈ ಖರ್ಚುಗಳಿಗೆ ತನ್ನ ತಂದೆಯಿಂದ ಬಂದ ಜಮೀನನ್ನು ಅಡವಿಟ್ಟರು ಹಾಗೂ ಸಾಲ ಮಾಡಿರುತ್ತಾರೆ .

3. 2003 ನೇ ಇಸವಿಯಿಂದ ಆರೋಪಿತರು ಹಾಗೂ ನಮ್ಮ ನಡುವೆ ಆಸ್ತಿ ವಿಚಾರದಲ್ಲಿ ಗಲಾಟೆ ಯಾಗುತ್ತಿದೆ. ಕ್ಯಾತುಂಗೆರೆಯಲ್ಲಿ ನನ್ನ ವಿಬಾಗಕ್ಕೆ ದಾವಾ ಹಾಕಲಾಗಿದೆ. ಅದು ಈಗಲೂ ಚಾಲ್ತಿಯಲ್ಲಿದೆ. ಆ ಕಾರಣ ಆರೋಪಿಗಳು ಅವರು ಹೇಳಿದಂತೆ ನಾವು ಕೇಳುತ್ತಿಲ್ಲ ಎಂದು ಪದೇ ಪದೇ ತೊಂದರೆ ಕೊಡುತ್ತಿದ್ದಾರೆ. ಪುಟ್ಟೀರಮ್ಮ ಹಾಗೂ ಲಕ್ಷ್ಮಿ ಎನ್ನುವ ಆರೋಪಿಗಳು ನಮ್ಮ ಮನೆಯ ಪಕ್ಕದ ಕೋಣೆಯಲ್ಲಿ ವಾಸವಿದ್ದಾರೆ. ಸದರಿ ಗಲಾಟೆಯಾದ ನಂತರ ಉಳಿದ ಆರೋಪಿಗಳು ಈ ಮನೆಯಲ್ಲಿಲ್ಲ. ಸದರಿ ಗಲಾಟೆಯಾದ ಮುಂಚಿನ ದಿನ ಸದರಿ ಆರೋಪಿಗಳೆಲ್ಲರೂ ಸದರಿ ಕೋಣೆಯಲ್ಲಿ ಸೇರಿದ್ದರು. ನನ್ನನ್ನು ಸಾಯಿಸುವ ಉದ್ದೇಶದಿಂದ 1 ನೇ ಆರೋಪಿ ನನ್ನ ಮೇಲೆ ದಿಂಡುಗಲ್ಲು ಎತ್ತಿಹಾಕಿದ್ದಾರೆ. ಹಲ್ಲೆ ವಿವರಗಳನ್ನು ಪೊಲೀಸರಿಗೆ ಹೇಳಿದ್ದೇನೆ.

4. ಈಗ ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 6 ಅಯುಧಗಳಿಂದಲೇ ಹಲ್ಲೆಯಾಗಿದೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ ಹಲ್ಲೆಯ ಸಮಯದಲ್ಲಿ ಚಾಸಾ 1 ಹಾಗೂ ನಾನು ಧರಿಸಿರುವ ಬಟ್ಟೆಗಳು ಎಂ ಒ 9 ರಿಂದ 13 ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ. ಎಂ ವಕೀಲರಿಂದಃ</u>

ಆರೋಪಿ ಪರ ವಕಿಲರು ಪಾಟೀಸವಾಲು ಮಾಡಲು ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲದೇ ಇರುವುದರಿಂದ ರೂ ***1500/-*** ಖರ್ಚು ವಿಧಿಸಿ ಪಾಟೀಸವಾಲಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

**(ನಾಗಜ್ಯೋತಿ ಕೆ.ಎ.)**
**1** ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.